ಅ) ಇಲ್ಲ. ಆದರೆ ಈ ಯೋಜನೆಯು ಕೆಲವು ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲು ಸಂಸ್ಥೆಯು ನೆರವಾಗುತ್ತಿದೆ.

ಇ) (ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಿಡಕಲ್ ಜಲಾಶಯದಿಂದ ನಿರ್ಮಾಣವಾಗುತ್ತಿರುವ ಕೊಚರಿ ಏರಣ ಕಾಲುವೆ ಹಾಗೂ ಏರಣಿ ಕೋಚೆರಿ ಯಾತ ನೀರಾವರಿ ಕಾಲಂವೆಗಳ ಬಗ್ಗೆ

೧೭೬(೬೨೭) ಶ್ರೀ ಮಲ್ಲಾರಗೌಡ ಎಸ್ ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಆಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕುರಣಿ ಕೋಚರಿ ಪ್ಲೋ ಕೆನಾಲ್ ಹಾಗೂ ಯಾತ ನೀರಾವರಿ ಕೆಲಸವು ಪ್ರಾರಂಭವಾಗಿ ಎಷ್ಟು ವರ್ಷವಾಯಿತು?

ಆ) ಯಾತ ನೀರಾವರಿ ಸಂಪೂರ್ಣ ಅನುಷ್ಠಾನಕ್ಕೆ ತಂದು ನೀರಾವರಿ ಮಾಡುವುದಕ್ಕಾಗಿ ಇನ್ನು ಎಷ್ಟು ಕಾಲ ಬೇಕಾಗುತ್ತದೆ ಹಾಗೂ ಅದಕ್ಕೆ ತಗಲುವ ಖರ್ಚು ಎಷ್ಟು?

ಇ) ಕುರಣಿ ಹಾಗೂ ಕೊಚರಿ ಕಾಲುವೆಯು ನಿರ್ಮಾಣದಲ್ಲಿ ತೊಂದರೆ ಉದ್ಭವಿಸಿದ್ದು ಅದನ್ನು ದೂರ ಮಾಡಲು ಸರ್ಕಾರದಿಂದ ಇಲ್ಲಿಯವರೆಗೆ ತೆಗೆದು ಕೊಂಡಿರುವ ಕ್ರಮವೇನು?

ಈ) ಕೊಚರಿ ಯಾತ ನೀರಾವರಿ ಕಾಲುವೆಯು ಗ್ರಾಮಪಪನ್ನು ಹೆಚ್ಚು ಮಾಡಿ ಹಿರಣ್ಯಕೇಶಿ ನದಿಯ ಮೇಲೆ ಇರುವ ಗೋಟರು ಬೇಯರಕ್ಕೆ ನೀರು ಬಿಡುವುದಕ್ಕಾಗಿ ಸರ್ಕಾರದಿಂದ ಇಲಾಖೆಗೆ ಯೋಜನಾ ಅಂದಾಜು ತಯಾರು ಮಾಡಲು ಆದೇಶ ನೀಡುವುದರಲ್ಲಿ ತಡ ವಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕುರಣಿ ಏತ ನೀರಾವರಿ ಮತ್ತು ಪ್ಲೋ ಕಾಲುವೆಯು ೧೯೮೦-೮೧ರಲ್ಲಿ ಪ್ರಾರಂಭ ವಾಯಿತು. ಕೊಚರಿ ಪ್ಲೋ ಕಾಲುವೆಯು ೧೯೮೨-೮೩ರಲ್ಲಿ ಪ್ರಾರಂಭವಾಯಿತು. ಕೊಚರಿ ಏತ ನೀರಾವರಿ ಯೋಜನೆಯು ಇನ್ನೂ ಪ್ರಾರಂಭವಾಗಿಲ್ಲ,

ಆ) ಕುರಣಿ ಏತ ನೀರಾವರಿ ಯೋಜನೆಯನ್ನು ಹಂತಹಂತವಾಗಿ ಅನುಷ್ಠಾನಕ್ಕೆ ತಂದು ನೀರಾ ವರಿಯನ್ನು ೧೯೯೦ಕ್ಕೆ ಸಂಪೂರ್ಣ ಮಾಡಲು ಯೋಜಿಸಲಾಗಿದೆ. ಇದರ ವೆಚ್ಚ ಸುಮಾರು ರೂ. ೪೬೦ ಲಕ್ಷರೂಗಳು. ಕೊಚರಿ ಏತ ನೀರಾವರಿ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ.

ಇ) ಕುರಣಿ ಯೋಜನೆಯು ಹಂತ ಹಂತವಾಗಿ ನಡೆಯುತ್ತಿದೆ. ಕೊಚರಿ ಏತ ನೀರಾವರಿಯು ಇನ್ನೂ ಪ್ರಾರಂಭವಾಗಿಲ್ಲ.

ಈ) ಕೊಚರಿ ಏತ ನೀರಾವರಿ ಯೋಜನೆಯ ಅನ್ವೇಷಣಾ ಕಾರ್ಯಗಳು ಪ್ರಗತಿಯಲ್ಲಿವೆ. ಅನ್ವೇಷಣೆಗಳು ಪೂರೈಸಿದ ನಂತರ ಅಂದಾಜು ತಯಾರು ಮಾಡಲು ಉದ್ದೇಶಿಸಲಾಗಿದೆ.

ಕೃಷಿಯಲ್ಲಿ ಪ್ರಗತಿ ಸಾಧಿಸಿದ ರೈತರಿಗೆ ಪ್ರಸಸ್ತಿ ನೀಡುವ ಬಗ್ಗೆ

೧೭೭ (೪೦೧) ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯ ವ್ಯವಸಾಯ ರಂಗಕ್ಕೆ ಕೃಷಿ ವಿಶ್ವವಿದ್ಯಾನಿಲಯ ನೀಡಿರುವ ಮಹೋನ್ನತ ಕೊಡುಗೆಗಳು ಯಾವುವು ? ಇದಕ್ಕೆ ಕಾರಣಕರ್ತರಾದ ವಿಜ್ಞಾನಿಗಳು ಯಾರು, ಅವರಿಗೆ ದೊರೆತಿರುವ ಪ್ರಸಸ್ತಿಗಳು ಯಾವುವು ?

ಆ) ರಾಜ್ಯದಲ್ಲಿ ಬೆಳೆಯುವ ನಾನಾ ಬೆಳೆಗಳಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿದ ರೈತರನ್ನು ಪ್ರತಿ ವರ್ಷ ಗೌರವಿಸುವ ಪದ್ಧತಿ ಏನಾದರೂ ರಾಜ್ಯದಲ್ಲಿ ಜಾರಿಯಲ್ಲಿದೆಯೇ?

ಇ) ಹಾಗಿದ್ದಲ್ಲಿ ಆ ರೀತಿ ಗೌರವಕ್ಕೆ ಒಳಪಟ್ಟ ರೈತರ ಹೆಸರುಗಳೇನು ? ಮತ್ತು ಅವರಿಗೆ ಸಂದ ಗೌರವಗಳೇನು, ಇಲ್ಲಿಯವರೆಗೆ ಎಷ್ಟು ಜನ ರೈತರಿಗೆರಾಜ್ಯ ಪ್ರಶಸ್ತಿಗಳನ್ನು ಕೊಡಲಾಗಿದೆ ?

ಈ) ಈ ಪದ್ಧತಿ ಹಾಲಿ ಜಾರಿಯಲ್ಲಿಲ್ಲದಿದ್ದರೆ ಈ ಪದ್ಧತಿಯನ್ನು ಜಾರಿಗೆ ಕೂಡಲೇ ತರಲಾಗುವುದೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).

ಅ) ಇಲ್ಲಿಯವರೆಗೆ ಕೃಷಿ ವಿಶ್ವವಿದ್ಯಾನಿಲಯದಿಂದ ೯೭ ಅಧಿಕ ಇಳುವರಿ ಕೊಡುವ ತಳಿಗಳನ್ನು ವಿವಿಧ ಬೆಳೆಗಳಲ್ಲಿ ರೈತರ ಅನುಕೂಲಕ್ಕಾಗಿ ಬಿಡುಗಡೆ ಮಾಡಲಾಗಿದೆ. ಒಂಬತ್ತು ಕೃಷಿ ಉಪಕರಣಗಳನ್ನು ಸಹ ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಅಧಿಕ ಇಳುವರಿಗಾಗಿ ಸುಧಾರಿಸಿದ ಬೇಸಾಯ ಕ್ರಮಗಳ ಬಗ್ಗೆ ಸಂಶೋಧನೆ ನಡೆಸಿ ಸಂಶೋಧನಾ ಫಲಿತಾಂಶವನ್ನು ರೈತರಿಗೆ ಶಿಫಾರಸ್ಸು ಮಾಡಲಾಗಿದೆ. ಊಜಿ ನೊಣದ ಬಾಧೆ, ಭತ್ತದಲ್ಲಿ ಬಿಳಿಹೆಚ್ ಪಿಡುಗು, ತೆಂಗಿನಲ್ಲಿ ಕಪ್ಪು ತಲೆ ಹುಳುವಿನ ಬಾಧೆ ಇತ್ಯಾದಿ ತೊಂದರೆಗಳಿಗೆ ತಕ್ಷಣ ಪ್ರಯೋಗಗಳನ್ನು ಮಾಡಿ ಅವುಗಳಿಗೆ ಪರಿಹಾರ ಕಂಡು ಹಿಡಿದು ಶಿಫಾರಸ್ಸು ಮಾಡಲಾಗಿದೆ. ಈ ಎಲ್ಲಾ ಸಂಶೋಧನಾ ಫಲಿತಾಂಶಗಳು ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ಸಮೂಹ ಕೊಡುಗೆ. ಇದರಲ್ಲಿ ಕೆಲವು ವಿಜ್ಞಾನಿಗಳಿಗೆ ಕೆಲವು ಪ್ರಶಸ್ತಿಗಳು ದೊರೆತಿವೆ :

ವಿಜ್ಞಾನಿಗಳ ಹೆಸರು.	ದೊರೆತಿರುವ ಪ್ರಶಸ್ತಿಗಳು.
೧. ಡಾ॥ ಪಿ. ಹೆಚ್.ಲಕ್ಷಣಯ್ಯ	ರಾಜ್ಯೋತ್ಸವ ಪ್ರಶಸ್ತಿ.
೨. ಡಾ॥ ಜಿ. ಹೆಚ್. ಕಾತರಕ್ಕಿ	ರಾಜ್ಯೋತ್ಸವ ಪ್ರಶಸ್ತಿ.
೩. ಡಾ॥ ನಾ. ಗು. ಪೆರೂರ	ಕೃಷಿ ವಿಶ್ವವಿದ್ಯಾನಿಲಯ ಪ್ರಶಸ್ತಿ.
೪. ಡಾ॥ ಸಿ. ಹಿತ್ತಲಮನಿ	ರಾಜ್ಯೋತ್ಸವ ಪ್ರಶಸ್ತಿ.
೫. ಡಾ॥ ಕೆ. ಕೃಷ್ಣಮೂರ್ತಿ	೧) ರಾಜ್ಯೋತ್ಸವ ಪ್ರಶಸ್ತಿ. ೨) ಡಾ॥ ಪಿ. ಬಿ. ಸರ್ಕಾರ ಎಂಡೋಮೆಂಟ್ ಪ್ರಶಸ್ತಿ. ೩) ಕೃಷಿ ವಿಶ್ವವಿದ್ಯಾಲಯ ಪ್ರಶಸ್ತಿ.
೬. ಡಾ॥ ಬಿ. ಎಸ್. ರಾಮಪ್ಪ.	೧) ರಾಜ್ಯೋತ್ಸವ ಪ್ರಶಸ್ತಿ. ೨) ಹೂಕರ ಪ್ರಶಸ್ತಿ. ೩) ಹರಿ ಓಮ್ ಪ್ರಶಸ್ತಿ.
೭. ಡಾ॥ ಎಂ. ಮಹಾದೇವಪ್ಪ	೧) ಹೂಕರ್ ಪ್ರಶಸ್ತಿ. ೨) ರಾಜ್ಯೋತ್ಸವ ಪ್ರಶಸ್ತಿ.
೮. ಡಾ॥ ವೀರೇಶ್. ಜಿ. ಕೆ.	೧) ಹೂಕರ್ ಪ್ರಶಸ್ತಿ. ೨) ಡಾ॥ ರಾಜ ಕುಮಾರ್ ಪ್ರಶಸ್ತಿ.
೯. ಡಾ॥ ಐ. ಆರ್. ಮೊರಬದ	೧) ಡಾ. ರಾಜಕುಮಾರ್ ಪ್ರಶಸ್ತಿ.
೧೦. ಡಾ॥ ಶ್ರೀಕಾಂತ ಕುಲಕರ್ಣಿ	ನಾಸ್ಥಮ್ಮ ದತ್ತಾತ್ರೇಯ ಪ್ರಶಸ್ತಿ.
೧೧. ಡಾ॥ ಸೀತಾರಾಮ್ ಮತ್ತು ಶ್ರೀಮತಿ ಕುಸುಮಕುಮಾರಿ	ಕೃಷಿ ಅನುಸಂಧಾನ ಪರಿಷತ್ತಿನ ಎಂಡೊವೇಂಟ್ ಪ್ರಶಸ್ತಿ.
೧೨. ಡಾ॥ ಬಿ. ಎಸ್. ನಾಯ್ಡು	ನಾಗಮ್ಮ ದತ್ತಾತ್ರೇಯ ಪ್ರಶಸ್ತಿ.
೧೩. ಡಾ॥ ಕೆ ಎಸ್. ಕೃಷ್ಣಶಾಸ್ತ್ರಿ	ಜೆ. ಜೆ. ಚಿನೋಯ ಪ್ರಶಸ್ತಿ.
೧೪. ಡಾ॥ ಎಂ. ಉದಯಕುಮಾರ	ಡಾ॥ ಅಸಾನಾ ಪ್ರಶಸ್ತಿ.

ಆ) ಇಲ್ಲ.

ಇ) ಇಲ್ಲಿಯವರೆಗೆ ರೈತರಿಗೆ ರಾಜ್ಯ ಪ್ರಶಸ್ತಿಗಳೇನು ಕೊಟ್ಟಿರುವುದಿಲ್ಲ.

ಈ) ಈ ಸೂಚನೆಯನ್ನು ಪರಿಶೀಲಿಸಲಾಗುವುದು.

ಕಾವೇರಿ ನೀರಿನ ಹಂಚಿಕೆಯ ಬಗ್ಗೆ

೧೭೯(೧೯) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ೧೯೭೪ರ ಒಪ್ಪಂದದ ಪ್ರಕಾರ ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಕರ್ನಾಟಕದ ಹಿತವನ್ನು ರಕ್ಷಿಸಲು ಹೊಸ ಸಲಹೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ತಮಿಳುನಾಡಿನೊಂದಿಗೆ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಸಲಹೆಯೇನಾದರೂ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೭೪ ''ಒಪ್ಪಂದದ'' ಪ್ರಕಾರ ಯಾವ ಹೊಸ ಸಲಹೆಯೂ ಪರಿಶೀಲನೆಯಲ್ಲಿಲ್ಲ. ಕರ್ನಾಟಕವು ಸಂಬಂಧಪಟ್ಟ ರಾಜ್ಯಗಳಿಗೆ ಕಾವೇರಿ ನೀರನ್ನು ಕಣಿವೆಯ ಅಂಕಿ ಅಂಶಗಳಿಗನುಗುಣವಾಗಿ (ಬೇಸಿಸ್ ಫ್ಯಾಕ್ಟರ್) ನ್ಯಾಯಯುತವಾಗಿ ಹಂಚಲು ಹೊಸ ಸಲಹೆಯನ್ನು ಸೂಚಿಸಿದೆ. ಇದರಂತೆ ಕೇಂದ್ರ ಸರ್ಕಾರಕ್ಕೆ ೧೯೮೧ರ ಕರಡು ಒಪ್ಪಂದವೊಂದನ್ನು ಕಳಿಸಲಾಗಿದೆ.

ಆ) ಇಲ್ಲ.

ಪ್ರತಿ ಜಿಲ್ಲೆಯಲ್ಲಿ ಒಂದ ನೂರು ಚೆದರ ಕಿ. ಮಿ. ವಿಸ್ತೀರ್ಣಕ್ಕೆ ಎಷ್ಟು ಮೈಲಿ ಉದ್ದದ ರಸ್ತೆ ಇದೆ

೧೮೦ (೪೦೮) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪ್ರತಿ ಜಿಲ್ಲೆಯಲ್ಲೂ ಒಂದನೂರು ಚದರ ಕಿ. ಮಿ. ವಿಸ್ತೀರ್ಣಕ್ಕೆ ಎಷ್ಟು ಮೈಲಿ ಉದ್ದ ರಸ್ತೆ ಇದೆ (ಜಿಲ್ಲಾವಾರು ಟಾರು ರಸ್ತೆ, ಜಿಲ್ಲೆ ರಸ್ತೆ, ಫೇರ್ ವೆದರ್ ರಸ್ತೆ, ಗ್ರಾಮೀಣ ರಸ್ತೆಗಳ ವಿವರಗಳನ್ನು ಬೇರೆ ಬೇರೆಯಾಗಿ ಒದಗಿಸುವುದು?

ಆ) ಪ್ರತಿ ಜಿಲ್ಲೆಯಲ್ಲೂ ಒದಗಿಸಿರುವ ಹಣದಲ್ಲಿ ಹಾಳಿ ಇರುವ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಮತ್ತು ಹೊಸ ರಸ್ತೆಗಳನ್ನು ನಿರ್ಮಾಣ ಮಾಡಲು ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು ? (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು).

ಶ್ರೀ ಹೆಚ್. ಡಿ. ದೇವೇಗೌಡ. (ಲೋಕೋಪಯೋಗಿ ಕಾರ್ಯದರ್ಶಿ ಮತ್ತು ನೀರಾವರಿ ಸಚಿವರು).—

ಅ) ಜಿಲ್ಲಾವಾರು ವಿವರಗಳನ್ನು ಅನುಬಂಧ-೧ ರಲ್ಲಿ ಕೊಡಲಾಗಿದೆ.

ಆ) ಆರ್ಥಿಕ ಲಭ್ಯತೆಯನ್ನಾಧರಿಸಿ ಹೊಸ ರಸ್ತೆಗಳ ನಿರ್ಮಾಣ ಮತ್ತು ಇರುವ ರಸ್ತೆಗಳ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗುತ್ತಿದೆ. ೮೬-೮೭ರ ಸಾಲಿನಲ್ಲಿ ಯೋಜನಾ ಬಾಬತ್ತಿನಲ್ಲಿ ರಸ್ತೆ ಕೆಲಸಗಳಿಗೆ ಮೆಚ್ಚ ಮಾಡಲು ಉದ್ದೇಶಿಸಿರುವ ಹಣದ ಜಿಲ್ಲಾವಾರು ವಿವರಗಳನ್ನು ಅನುಬಂಧ-೨ರಲ್ಲಿ ಕೊಡಲಾಗಿದೆ.